# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು

**ಸಂ.ಕರಾಸಾ/ಕೇಕ/ಸಂ/ವಾ-2/ 7403 /2018-19** **ದಿನಾಂಕ: 07.03.2019**

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 798 / 2019**

ವಿಷಯ : ಕ.ರಾ.ರ.ಸಾ.ನಿಗಮದ ವತಿಯಿಂದ ಮಾಸಿಕ ಬಸ್ ಪಾಸುಗಳನ್ನು ವಿತರಿಸುವ ಬಗ್ಗೆ.

ಉಲ್ಲೇಖ : 1. ಮಂಡಳಿ ಠರಾವು ಸಂಖ್ಯೆ 7515 ದಿನಾಂಕ 20.11.1997.
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 439 ದಿನಾಂಕ 09.12.1997.
3. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 588/2007 ದಿನಾಂಕ 13.01.2007.
4. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 747 / 2014 ದಿನಾಂಕ 05.05.2014.
5. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 751/2014 ದಿನಾಂಕ 06.05.2014.
6. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 753 /2014 ದಿನಾಂಕ 06.05.2014.
7. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 766 /2015 ದಿನಾಂಕ 29.10.2015.
8. ಸಂ:ಕರಾಸಾ/ಕೇಕ/ಸಂ/ಸಿ2/1640/6942/2015-16 ದಿನಾಂಕ 21.01.2016
9. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 778 / 2016 ದಿನಾಂಕ 07.12.2016.

-:-

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹಂತವಾರು ಮಾಸಿಕ ಬಸ್ ಪಾಸುಗಳನ್ನು ರಿಯಾಯಿತಿ ದರದಲ್ಲಿ ವಿತರಣೆ ಮಾಡಲು ನಿಗಮದ ಮಂಡಳಿ ಸಭೆಯ ಠರಾವು ಸಂಖ್ಯೆ 7515, ದಿನಾಂಕ 20-11-1997 ರನ್ವಯ ಕ್ರಮ ಕೈಗೊಂಡಿರುತ್ತದೆ. ಕಾರ್ಯಾಚರಣೆ ವೆಚ್ಚ, ಡೀಸೆಲ್ ದರ ಹೆಚ್ಚಳದಿಂದಾಗಿ ಪ್ರಯಾಣ ದರ ಪರಿಷ್ಕರಿಸುವ ಸಂದರ್ಭಗಳಲ್ಲಿ ಮಾಸಿಕ ಬಸ್ ಪಾಸುಗಳ ದರಗಳನ್ನು ಪರಿಷ್ಕರಣೆ ಮಾಡುತ್ತಾ ಬರಲಾಗಿದೆ.

ನಿಗಮವು ಪ್ರಯಾಣಿಕರ ಅನುಕೂಲಕ್ಕಾಗಿ ಹಂತವಾರು ಮಾಸಿಕ ಪಾಸುಗಳು, ನಗರ ಸಾರಿಗೆಗಳಲ್ಲಿ ಪ್ರಯಾಣಿಸಲು ಮಾಸಿಕ ಪಾಸುಗಳು ಹಾಗೂ ಈ ಪಾಸುಗಳಲ್ಲಿ ಹಿರಿಯ ನಾಗರಿಕರಿಗೆ ಶೇ.10 ರಷ್ಟು ರಿಯಾಯಿತಿ ದರದಲ್ಲಿ ಮಾಸಿಕ ಪಾಸುಗಳನ್ನು ವಿತರಣೆ ಮಾಡಲಾಗುತ್ತಿದೆ.

ಮಾಸಿಕ ಬಸ್ ಪಾಸ್ ವಿತರಣಾ ಸಂಬಂಧ ಇಲ್ಲಿಯವರೆಗೆ ಹೊರಡಿಸಲಾಗಿರುವ ಸಾಮಾನ್ಯ ಸ್ಥಾಯಿ ಆದೇಶ / ಸುತ್ತೋಲೆಗಳಲ್ಲಿನ ಆದೇಶಗಳನ್ನು ಕ್ರೋಢೀಕರಿಸಿ, ಒಂದು ಆದೇಶದಲ್ಲಿ ತರುವ ಉದ್ದೇಶದಿಂದ ಈ ಸಾಮಾನ್ಯ ಸ್ಥಾಯಿ ಆದೇಶವನ್ನು ಹೊರಡಿಸಲಾಗುತ್ತಿದ್ದು, ಮಾಸಿಕ ಬಸ್ ಪಾಸ್ ವಿತರಣೆಯಲ್ಲಿ ಈ ಕೆಳಕಂಡ ನಿರ್ದೇಶನಗಳನ್ನು ಅನುಸರಿಸುವುದು.

## I. ಮಾಸಿಕ ಬಸ್ ಪಾಸುಗಳ ವಿಧ :

ಪ್ರಸ್ತುತ, ನಿಗಮವು ಕೆಳಕಂಡ ವರ್ಗದ ಮಾಸಿಕ ಬಸ್ ಪಾಸುಗಳನ್ನು ವಿತರಿಸುತ್ತಿದೆ.

1. ವೇಗದೂತ ಸಾರಿಗೆ ಪಾಸ್
2. ಸಾಮಾನ್ಯ ಸಾರಿಗೆ ಪಾಸ್
3. ನಗರ ಸಾರಿಗೆ ಪಾಸ್

### 1. ವೇಗದೂತ ಸಾರಿಗೆ ಮಾಸಿಕ ಬಸ್ ಪಾಸ್ :

ವೇಗದೂತ ಸಾರಿಗೆ ಮಾಸಿಕ ಬಸ್ ಪಾಸುದಾರರು ನಿಗಮವು ಆಚರಣೆಗೊಳಿಸುವ ವೇಗದೂತ, ತಡೆರಹಿತ ಹಾಗೂ ಸಾಮಾನ್ಯ ಸಾರಿಗೆಗಳಲ್ಲಿ ಪ್ರಯಾಣಿಸಬಹುದು. ಪ್ರಸ್ತುತ 20 ಹಂತಗಳ ದೂರದವರೆಗೆ ವೇಗದೂತ ಸಾರಿಗೆಯ ಮಾಸಿಕ ಬಸ್ ಪಾಸುಗಳನ್ನು ವಿತರಿಸಲಾಗುತ್ತಿದೆ.

2. **ಸಾಮಾನ್ಯ ಸಾರಿಗೆ ಮಾಸಿಕ ಬಸ್ ಪಾಸ್ :**
ಸಾಮಾನ್ಯ ಸಾರಿಗೆ ಮಾಸಿಕ ಬಸ್ ಪಾಸ್‌ನ್ನು ಹೊಂದಿರುವ ಪ್ರಯಾಣಿಕರು ನಿಗಮವು ಆಚರಣೆಗೊಳಿಸುವ ಸಾಮಾನ್ಯ ಸಾರಿಗೆಗಳಲ್ಲಿ (ಗ್ರಾಮಾಂತರ) ಮಾತ್ರ ಪ್ರಯಾಣಿಸಬಹುದು. ಪ್ರಸ್ತುತ 10 ಹಂತಗಳ ದೂರದವರೆಗೆ ಸಾಮಾನ್ಯ ಸಾರಿಗೆ ಮಾಸಿಕ ಬಸ್ ಪಾಸುಗಳನ್ನು ವಿತರಿಸಲಾಗುತ್ತಿದೆ.

ಪ್ರಸ್ತುತ ಜಾರಿಯಲ್ಲಿರುವ ವೇಗದೂತ ಹಾಗೂ ಸಾಮಾನ್ಯ ಸಾರಿಗೆಗಳ ಹಂತವಾರು ಮಾಸಿಕ ಬಸ್ ಪಾಸ್ ದರಗಳನ್ನು ಅನುಬಂಧ–ಅ ರಲ್ಲಿ ಅಡಕಗೊಳಿಸಿದೆ.

3. **ನಗರ / ಹೊರವಲಯ / ಹವಾನಿಯಂತ್ರಿತ ನಗರ ಸಾರಿಗೆ ಮಾಸಿಕ ಬಸ್ ಪಾಸ್:**
ಕ.ರಾ.ರ.ಸಾ.ನಿಗಮವು ನಗರ ಸಾರಿಗೆಗಳನ್ನು ಆಚರಣೆ ಮಾಡುತ್ತಿರುವ ಮೈಸೂರು, ತುಮಕೂರು, ಹಾಸನ ಮತ್ತು ಮಂಗಳೂರು ನಗರಗಳಲ್ಲಿ ನಗರ ಸಾರಿಗೆಗಳಿಗೆ ಮಾಸಿಕ ಬಸ್ ಪಾಸುಗಳನ್ನು ವಿತರಣೆ ಮಾಡುತ್ತಿದೆ. ಈ ಪಾಸುಗಳ ದರಗಳನ್ನು ಅನುಬಂಧ–ಆ ರಲ್ಲಿ ಅಡಕಗೊಳಿಸಿದೆ.

## II. ಮಾಸಿಕ ಪಾಸುಗಳಲ್ಲಿ ಹಿರಿಯ ನಾಗರಿಕರಿಗೆ ರಿಯಾಯಿತಿ :

ಸುವರ್ಣ ಕರ್ನಾಟಕ ವರ್ಷ ಸಂಭ್ರಮಾಚರಣೆಯ ಸಾಲಿನಿಂದ ಅಂದರೆ 2007 ನೇ ಸಾಲಿನಿಂದ ಹಿರಿಯ ನಾಗರಿಕರಿಗೆ ಮಾಸಿಕ ಬಸ್ ಪಾಸುಗಳ ದರಗಳಲ್ಲಿ ಶೇ.10 ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಪ್ರಸ್ತುತ ಈ ರಿಯಾಯಿತಿ ಪಾಸಿನ ಸೌಲಭ್ಯವನ್ನು 60 ವರ್ಷ ಪೂರೈಸಿದ ಹಾಗೂ ಅದಕ್ಕೂ ಮೇಲ್ಪಟ್ಟ ವಯಸ್ಸಿನವರಿಗೆ ನೀಡಲಾಗುತ್ತಿದೆ.

ರಿಯಾಯಿತಿ ದರದ ಮಾಸಿಕ ಬಸ್ ಪಾಸು ಪಡೆಯಲಿಚ್ಚಿಸುವ ಹಿರಿಯ ನಾಗರಿಕರು ಕೆಳಕಂಡ ಯಾವುದಾದರೊಂದು ಗುರುತಿನ ಚೀಟಿಯ ಮೂಲಪ್ರತಿಯನ್ನು ತೋರಿಸಿ, ರಿಯಾಯಿತಿ ಮಾಸಿಕ ಬಸ್ ಪಾಸ್ ಪಡೆಯಬಹುದಾಗಿರುತ್ತದೆ. ಮಾಸಿಕ ಬಸ್ ಪಾಸ್‌ನಲ್ಲಿ ಗುರುತಿನ ಚೀಟಿಯ ಸಂಖ್ಯೆಯನ್ನು ದಾಖಲಿಸಲು ಅವಕಾಶವಿರುವ ಕಲಂನಲ್ಲಿ ಗುರುತಿನ ಚೀಟಿಯ ಸಂಖ್ಯೆಯನ್ನು ದಾಖಲಿಸಬೇಕಿರುತ್ತದೆ ಹಾಗೂ ಪ್ರಯಾಣಿಸುವಾಗ ಪಾಸಿನೊಂದಿಗೆ ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಿರುತ್ತದೆ.

1. ಕೇಂದ್ರ ಸರ್ಕಾರ ವಿತರಿಸಿರುವ ಪಾಸ್‌ಪೋರ್ಟ್
2. ಚುನಾವಣಾ ಆಯೋಗ ವಿತರಿಸಿರುವ ಮತದಾರರ ಗುರುತಿನ ಚೀಟಿ
3. ಹುಟ್ಟಿದ ದಿನಾಂಕ ನಮೂದಿಸಿರುವ ಆಧಾರ್ ಕಾರ್ಡ್
4. ಚಾಲನಾ ಪರವಾನಗಿ ಪತ್ರ (ಡ್ರೈವಿಂಗ್ ಲೈಸೆನ್ಸ್)
5. ವಾಸಸ್ಥಳ ಹಾಗೂ ಹುಟ್ಟಿದ ದಿನಾಂಕವನ್ನು ನಮೂದಿಸಿರುವಂತಹ ಭಾರತ ಸರ್ಕಾರದ ಇಲಾಖೆಗಳು / ಭಾರತ ಸರ್ಕಾರದ ಸಾರ್ವಜನಿಕ ವಲಯದ ಉದ್ದಿಮೆ / ಸಂಸ್ಥೆಗಳು (PSU's) ವಿತರಿಸಿರುವ ಗುರುತಿನ ಚೀಟಿ
6. ವಾಸಸ್ಥಳ ಹಾಗೂ ಹುಟ್ಟಿದ ದಿನಾಂಕವನ್ನು ನಮೂದಿಸಿರುವಂತಹ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಗುರುತಿನ ಚೀಟಿ (NREGA card)
7. ವಾಸಸ್ಥಳ ಹಾಗೂ ಹುಟ್ಟಿದ ದಿನಾಂಕವನ್ನು ನಮೂದಿಸಿರುವಂತಹ ಕರ್ನಾಟಕ ಸರ್ಕಾರದ ಇಲಾಖೆಗಳು / ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯದ ಉದ್ದಿಮೆ / ಸಂಸ್ಥೆಗಳು ವಿತರಿಸಿರುವ ಗುರುತಿನ ಚೀಟಿ
8. ಕರ್ನಾಟಕ ಸರ್ಕಾರದ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ನಿರ್ದೇಶನಾಲಯದವರು ವಿತರಿಸಿರುವ ಭಾವಚಿತ್ರವಿರುವ ಗುರುತಿನ ಚೀಟಿ (60 ವರ್ಷ ಪೂರ್ಣಗೊಂಡಿರುವ ಹಾಗೂ ಅದಕ್ಕೂ ಮೇಲ್ಪಟ್ಟ ಹಿರಿಯ ನಾಗರಿಕರಿಗೆ)
9. ನಿಗಮದ ವತಿಯಿಂದ ಇವರೆಗೆ ವಿತರಿಸಲಾಗಿರುವ ಹಿರಿಯ ನಾಗರಿಕರ ಗುರುತಿನ ಚೀಟಿ.

ಪ್ರಸ್ತುತ ವಿತರಣೆಯಲ್ಲಿರುವ ಎಲ್ಲಾ ವರ್ಗದ ಮಾಸಿಕ ಪಾಸುಗಳಲ್ಲಿಯೂ ಹಿರಿಯ ನಾಗರಿಕರಿಗೆ ಶೇ.10 ರಷ್ಟು ರಿಯಾಯಿತಿಯನ್ನು ನೀಡಬೇಕಿರುತ್ತದೆ. ಹಿರಿಯ ನಾಗರಿಕರ ಮಾಸಿಕ ಬಸ್ ಪಾಸ್ ವಿತರಣೆಯು ತುಂಬಾ ಕಡಿಮೆಯಿರುವುದರಿಂದ, ಪ್ರತ್ಯೇಕವಾಗಿ ಪಾಸ್ ಕಾರ್ಡ್‌ಗಳನ್ನು ಮುದ್ರಿಸಲಾಗುತ್ತಿಲ್ಲ. ಹಾಲಿ ವಿತರಣೆಯಲ್ಲಿರುವ ಪಾಸುಗಳಲ್ಲಿ ಹಿರಿಯ ನಾಗರಿಕರಿಗೆ ನಿಗದಿಪಡಿಸಿರುವ ರಿಯಾಯಿತಿ ದರಗಳನ್ನು ಸದರಿ ವರ್ಗದ ಮಾಸಿಕ

ಪಾಸುಗಳ ಮೇಲೆ ಸಂಚಾರ ಇಲಾಖೆ ಹಾಗೂ ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳ ಸಹಭಾಗಿತ್ವದಲ್ಲಿ ನಿಯಮಾವಳಿಗಳನ್ವಯ ರೀ–ಸ್ಟ್ಯಾಂಪಿಂಗ್ ಮಾಡಿ ವಿತರಿಸಲು ಕ್ರಮ ಕೈಗೊಳ್ಳುವುದು.

ಹಿರಿಯ ನಾಗರಿಕರ ವರ್ಗವಾರು ಬಸ್ ಪಾಸ್‌ಗಳ ವಿತರಣಾ ವರದಿಯನ್ನೂ ಸಹ ಪ್ರತಿ ತಿಂಗಳು ನಿರ್ದಿಷ್ಟ ತ:ಖ್ತೆಯಲ್ಲಿ ಕೇಂದ್ರ ಕಛೇರಿಗೆ ಕಳುಹಿಸುವುದು.

## III. ಮಾಸಿಕ ಬಸ್ ಪಾಸುದಾರರ ಗುರುತಿನ ಚೀಟಿ (ಹಿರಿಯ ನಾಗರಿಕರಿಗೆ ಅನ್ವಯಿಸುವುದಿಲ್ಲ) :

1. ಮಾಸಿಕ ಬಸ್ ಪಾಸುದಾರರ ಗುರುತಿನ ಚೀಟಿಗೆ ರೂ.50/– ದರ ವಿಧಿಸುವುದು.
2. ಮಾಸಿಕ ಬಸ್ ಪಾಸುದಾರರ ಗುರುತಿನ ಚೀಟಿಯ ಚಾಲ್ತಿ ಅವಧಿ 01 ವರ್ಷ(ವಿತರಣಾ ದಿನಾಂಕದಿಂದ).
3. ಮಾಸಿಕ ಬಸ್ ಪಾಸುದಾರರ ಗುರುತಿನ ಚೀಟಿ ಪಡೆಯಲು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ವಾಸಸ್ಥಳದ ವಿವರಗಳನ್ನು ಪಾಸ್ ಕೌಂಟರ್‌ನಲ್ಲಿ ನೀಡುವುದು. ಒಂದು ಭಾವಚಿತ್ರವನ್ನು ದಾಖಲಾತಿಯಲ್ಲಿ ಅಂಟಿಸಿ ವಾಸಸ್ಥಳದ ವಿವರಗಳನ್ನು ದಾಖಲಿಡುವುದು. ಮತ್ತೊಂದು ಭಾವಚಿತ್ರವನ್ನು ಗುರುತಿನ ಚೀಟಿಯಲ್ಲಿ ಅಂಟಿಸುವುದು. ಗುರುತಿನ ಚೀಟಿ ನವೀಕರಣದ ಸಮಯದಲ್ಲೂ ಎರಡು ಭಾವಚಿತ್ರಗಳನ್ನು ನೀಡಬೇಕಿರುತ್ತದೆ.
4. ಎಲ್ಲಾ ಬಸ್ ನಿಲ್ದಾಣ / ಪಾಸ್ ವಿತರಣಾ ಕೌಂಟರ್‌ಗಳಲ್ಲಿ ಗುರುತಿನ ಚೀಟಿ ಲಭ್ಯವಿರುವಂತೆ ಸಂಬಂಧಪಟ್ಟವರು ನೋಡಿಕೊಳ್ಳುವುದು.
5. ಮಾಸಿಕ ಬಸ್ ಪಾಸುದಾರರ ಗುರುತಿನ ಚೀಟಿಯ ನಮೂನೆಯನ್ನು **ಅನುಬಂಧ–ಇ** ರಲ್ಲಿ ಅಡಕಗೊಳಿಸಿದೆ.

## IV. ವೇಗದೂತ / ಸಾಮಾನ್ಯ (ಗ್ರಾಮಾಂತರ) ಸಾರಿಗೆ ಮಾಸಿಕ ಬಸ್ ಪಾಸುದಾರರ ಪ್ರಯಾಣ ಸೌಲಭ್ಯಗಳು ಮತ್ತು ನಿಯಮಾವಳಿಗಳು:

1. ವೇಗದೂತ / ಸಾಮಾನ್ಯ (ಗ್ರಾಮಾಂತರ) ಸಾರಿಗೆ ಪಾಸುಗಳನ್ನು ವಿತರಣೆಯಾದ ದಿನಾಂಕದಿಂದ 30 ದಿನಗಳ ಅವಧಿಗೆ ಚಾಲ್ತಿಯಲ್ಲಿರುವಂತೆ ವಿತರಿಸುವುದು.
2. ಟೋಲ್ (ಸುಂಕ ವಸೂಲಾತಿ) ಮೂಲಕ ಆಚರಣೆಯಾಗುವ ಮಾರ್ಗಗಳಲ್ಲಿ ಮಾಸಿಕ ಪಾಸುಗಳನ್ನು ಪಡೆಯುವ ಪಾಸುದಾರರಿಗೆ ಹೆಚ್ಚುವರಿಯಾಗಿ ಟೋಲ್ ದರಗಳನ್ನು 20 ದಿನಗಳಿಗೆ "to and fro basis" ಅನ್ವಯಿಸುವಂತೆ ಪಡೆಯುತ್ತಿದ್ದಲ್ಲಿ ಈ ಆದೇಶ ಜಾರಿಗೆ ಬಂದ ದಿನಾಂಕದಿಂದ ಒಂದು ಮಾರ್ಗದಲ್ಲಿ ರಿಯಾಯಿತಿ ನೀಡಿ, 20 ದಿನಗಳಿಗೆ ಒಂದು ಮಾರ್ಗದ (Oneway) ಟೋಲ್ ಶುಲ್ಕವನ್ನು ಮಾತ್ರ ಪಡೆಯುವುದು.

   ಟೋಲ್ ಶುಲ್ಕ ಪಾವತಿಸಿಕೊಳ್ಳುತ್ತಿರುವ ಬಗ್ಗೆ ಪ್ರತ್ಯೇಕವಾಗಿ ದಾಖಲಾತಿ ನಿರ್ವಹಿಸುವುದು. ಪಾಸುಗಳ ಮೇಲೆ ಟೋಲ್ ಶುಲ್ಕದ (ಟೋಲ್ ಶುಲ್ಕ ರೂ____) ಮೊಹರನ್ನು ಹಾಕಿ ವಿತರಣೆ ಮಾಡುವುದು. ಈ ಬಗ್ಗೆ ಪಾಸ್ ವಿತರಣಾ ಸಿಬ್ಬಂದಿ ಹಾಗೂ ಚಾಲನಾ ಸಿಬ್ಬಂದಿಗಳ ಮಾಹಿತಿಗೆ ತಂದು ನಿಗಮದ ಆದಾಯಕ್ಕೆ ಯಾವುದೇ ರೀತಿಯಲ್ಲಿ ನಷ್ಟವಾಗದಂತೆ ಕ್ರಮ ವಹಿಸುವುದು.

   ಟೋಲ್ ದರಗಳ ಪರಿಷ್ಕರಣೆ ಸಂದರ್ಭದಲ್ಲಿ, ಸಂಚಾರ(ಕಾ) ಇಲಾಖೆಯ ನಿರ್ದೇಶನಗಳನ್ವಯ ಎಲ್ಲಾ ವಿಭಾಗಗಳು ಮಾಸಿಕ ಹಾಗೂ ದಿನದ ಪಾಸುಗಳ ಟೋಲ್ ದರಗಳನ್ನು ಏಕರೂಪನಾಗಿ ವಿಧಿಸಲು ಕ್ರಮವಹಿಸುವುದು.
3. ವೇಗದೂತ ಮಾಸಿಕ ಬಸ್ ಪಾಸ್ ಹೊಂದಿದ ಪಾಸುದಾರರು ವೇಗದೂತ ಹಾಗೂ ಸಾಮಾನ್ಯ ಸೇವೆಗಳಲ್ಲಿ ಪ್ರಯಾಣಿಸಬಹುದಾಗಿದೆ.
4. ಸಾಮಾನ್ಯ ವರ್ಗದ ಮಾಸಿಕ ಬಸ್ ಪಾಸ್ ಹೊಂದಿದ ಪಾಸುದಾರರು ಸಾಮಾನ್ಯ (ಗ್ರಾಮಾಂತರ) ಸೇವೆಗಳಲ್ಲಿ ಮಾತ್ರ ಪ್ರಯಾಣಿಸಬಹುದಾಗಿದೆ.
5. ಪಾಸುಗಳನ್ನು ಎರಡು ಸ್ಥಳಗಳ ನಡುವೆ ಪ್ರಯಾಣಿಸಲು ಹಂತದ ಹೆಸರನ್ನು ನಮೂದಿಸಿ ವಿತರಿಸುವುದು.
6. ಹಂತವಾರು ಮಾಸಿಕ ಬಸ್ ಪಾಸುದಾರರು ನಿಗಮವು ಆಚರಣೆಗೊಳಿಸುವ ರಾಜಹಂಸ ಹಾಗೂ ಇನ್ನಿತರೆ ಪ್ರತಿಷ್ಠಿತ ಸಾರಿಗೆಗಳಲ್ಲಿ ಪ್ರಯಾಣಿಸಲು ಅವಕಾಶವಿರುವುದಿಲ್ಲ.
7. ಮಾಸಿಕ ಬಸ್ ಪಾಸ್ ಪಡೆಯಲು (ಹಿರಿಯ ನಾಗರಿಕರನ್ನು ಹೊರತುಪಡಿಸಿ), ನಿಗಮವು ವಿತರಿಸುವ ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಿರುತ್ತದೆ.

8. ಮಾಸಿಕ ಬಸ್ ಪಾಸುಗಳು ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಲಭ್ಯವಿರುವಂತೆ ಸಂಬಂಧಪಟ್ಟ ಅಧಿಕಾರಿಗಳು ನೋಡಿಕೊಳ್ಳುವುದು.
9. ಪಾಸುದಾರರು ಬಸ್ಸಿನಲ್ಲಿ ಪ್ರಯಾಣಿಸುವಾಗ ನಿರ್ವಾಹಕರು, ಚಾಲಕರು, ತನಿಖಾ ಸಿಬ್ಬಂದಿ ಹಾಗೂ ಅಧಿಕಾರಿಗಳು ಕೇಳಿದಾಗ ಪಾಸನ್ನು ತೋರಿಸಬೇಕಿರುತ್ತದೆ.
10. ಮಾಸಿಕ ಬಸ್ ಪಾಸನ್ನು ವರ್ಗಾಯಿಸುವಂತಿಲ್ಲ.
11. ಈ ಪಾಸುಗಳ ನಮೂನೆಯನ್ನು ಅನುಬಂಧ–ಈ ರಲ್ಲಿ ಅಡಕಗೊಳಿಸಿದೆ.

**V. ನಗರ ಸಾರಿಗೆ ಮಾಸಿಕ ಬಸ್ ಪಾಸುದಾರರ ಪ್ರಯಾಣ ಸೌಲಭ್ಯಗಳು :**

1. ಮೈಸೂರು ನಗರ ಮಾಸಿಕ ಬಸ್ ಪಾಸ್‌ಗಳು ಕ್ಯಾಲೆಂಡರ್ ತಿಂಗಳಲ್ಲಿ ಚಾಲ್ತಿಯಲ್ಲಿರುವಂತೆ ವಿತರಣೆ ಮಾಡುವುದು.
2. ಮೈಸೂರು ನಗರದಲ್ಲಿ ನಗರ, ಹೊರವಲಯ ಹಾಗೂ ವೋಲ್ವೋ ಮಾಸಿಕ ಪಾಸುಗಳು ವಿತರಣೆಯಲ್ಲಿರುತ್ತವೆ. ಅದರನ್ವಯ ನಗರ ಪಾಸುದಾರರು ನಗರ ಸಾರಿಗೆ ಬಸ್ಸುಗಳಲ್ಲಿ, ಹೊರವಲಯ ಸಾರಿಗೆ ಪಾಸುದಾರರು ನಗರ ಮತ್ತು ಹೊರವಲಯ ಸಾರಿಗೆ ಬಸ್ಸುಗಳಲ್ಲಿ ಹಾಗೂ ವೋಲ್ವೋ ಮಾಸಿಕ ಪಾಸುದಾರರು ನಗರ, ಹೊರವಲಯ ಮತ್ತು ವೋಲ್ವೋ ಬಸ್ಸುಗಳಲ್ಲಿ ಪ್ರಯಾಣಿಸಬಹುದಾಗಿರುತ್ತದೆ.
3. ಇತರೆ ನಗರ ಸಾರಿಗೆ ಮಾಸಿಕ ಬಸ್ ಪಾಸ್‌ಗಳು ವಿತರಣೆಯಾದ ದಿನಾಂಕದಿಂದ 30 ದಿನಗಳ ಅವಧಿಗೆ ಚಾಲ್ತಿಯಲ್ಲಿರುವಂತೆ ವಿತರಿಸುವುದು.
4. ಇತರೆ ನಗರಗಳಲ್ಲಿನ ಮಾಸಿಕ ಬಸ್ ಪಾಸುಗಳು ನಿರ್ದಿಷ್ಟ ಹಂತಗಳ ನಡುವೆ ಹಾಗೂ ಮಂಗಳೂರು ನಗರದಲ್ಲಿ ನಿರ್ದಿಷ್ಟ ಸ್ಥಳಗಳ ನಡುವೆ ವಿತರಣೆ ಮಾಡುವುದು.
5. ಈ ಎಲ್ಲಾ ವರ್ಗದ ಮಾಸಿಕ ಬಸ್ ಪಾಸ್ ಪಡೆಯಲು (ಹಿರಿಯ ನಾಗರಿಕರನ್ನು ಹೊರತುಪಡಿಸಿ) ನಿಗಮವು ವಿತರಿಸುವ ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಿರುತ್ತದೆ.
6. ಪಾಸುದಾರರು ಬಸ್ಸಿನಲ್ಲಿ ಪ್ರಯಾಣಿಸುವಾಗ ನಿರ್ವಾಹಕರು, ಚಾಲಕರು, ತನಿಖಾ ಸಿಬ್ಬಂದಿ ಹಾಗೂ ಅಧಿಕಾರಿಗಳು ಕೇಳಿದಾಗ ತೋರಿಸಬೇಕಿರುತ್ತದೆ.
7. ಮಾಸಿಕ ಬಸ್ ಪಾಸನ್ನು ವರ್ಗಾಯಿಸುವಂತಿಲ್ಲ.
8. ಈ ಪಾಸುಗಳ ನಮೂನೆಯನ್ನು ಅನುಬಂಧ–ಉ ರಲ್ಲಿ ಅಡಕಗೊಳಿಸಿದೆ.

**VI. ಮಾಸಿಕ ಬಸ್‌ಪಾಸ್ ಮುದ್ರಣ ಮತ್ತು ಪಾಸುಗಳ ದರ ಪರಿಷ್ಕರಣೆ ಸಮಯದಲ್ಲಿ ಅನುಸರಿಸಬೇಕಾದ ಕ್ರಮಗಳು :**

1. ಮುದ್ರಣ ಹಾಗೂ ಲೇಖನ ನಿಯಂತ್ರಣಾಧಿಕಾರಿಗಳು ಬೇಡಿಕೆಗನುಗುಣವಾಗಿ ಅಗತ್ಯ ಪ್ರಮಾಣದಲ್ಲಿ ಮಾಸಿಕ ಬಸ್ ಪಾಸುಗಳನ್ನು ಮುದ್ರಿಸಿ ಸರಬರಾಜುಗೊಳಿಸಲು ಕ್ರಮ ಕೈಗೊಳ್ಳುವುದು.
2. ಮಾಸಿಕ ಬಸ್ ಪಾಸ್‌ಗಳ ದರ ಪರಿಷ್ಕರಣೆ ಸಮಯದಲ್ಲಿ ಲಭ್ಯವಿರುವ ದಾಸ್ತಾನನ್ನು ಪರಿಷ್ಕೃತ ದರದ ಮೊಹರನ್ನು ಹಾಕಿ ಬಳಕೆ ಮಾಡಿಕೊಳ್ಳುವುದು.
3. ನೂತನ ದರದ ಮಾಸಿಕ ಪಾಸುಗಳು ಮುದ್ರಣವಾಗುವವರೆಗೆ ಪರಿಷ್ಕೃತ ದರದ ಮೊಹರಿನ ರಬ್ಬರ್ ಸ್ಟ್ಯಾಂಪ್‌ನ್ನು ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳು ಒದಗಿಸುವುದು. ರಬ್ಬರ್ ಸ್ಟಾಂಪ್‌ನಲ್ಲಿ ಸಂಬಂಧಿಸಿದ ವಿಭಾಗದ ಲೆಕ್ಕಾಧಿಕಾರಿಯ ಸಹಿಯನ್ನೊಳಗೊಂಡ ಮೊಹರು ಒಳಗೊಂಡಿರಬೇಕು. ರೀ–ಸ್ಟ್ಯಾಂಪಿಂಗ್‌ನ್ನು ಸಂಬಂಧಿಸಿದ ಲೆಕ್ಕಾಧಿಕಾರಿಯವರು, ಭದ್ರತಾ ಸಿಬ್ಬಂದಿಯವರ ಉಪಸ್ಥಿತಿಯೊಂದಿಗೆ ನಿರ್ವಹಿಸುವುದು.
4. ಕಡಿಮೆ ಮೌಲ್ಯದ ಪಾಸುಗಳ ಮೇಲೆ ಹೆಚ್ಚಿನ ದರದ ಮೌಲ್ಯವನ್ನು ರೀ–ಸ್ಟಾಂಪಿಂಗ್ ಮಾಡುವಾಗ ಕೇಂದ್ರ ಕಛೇರಿಯ ಅನುಮೋದನೆ ಪಡೆಯುವುದು.
5. ರೀ–ಸ್ಟ್ಯಾಂಪಿಂಗ್‌ನ್ನು ಒಂದು ಬಾರಿ ಮಾತ್ರ ಮಾಡುವುದು. ಬಳಕೆಯಲ್ಲಿಲ್ಲದ ಪಾಸುಗಳನ್ನು ಹೊಸ ದಾಸ್ತಾನು ಬಂದ ನಂತರ ನಿಯಮಾನುಸಾರ ನಾಶಪಡಿಸಲು ಕ್ರಮ ಕೈಗೊಳ್ಳುವುದು.
6. ಲೆಕ್ಕಪತ್ರ ಇಲಾಖೆಯಿಂದ ಪಾಸುಗಳಿಗೆ ಬೇಡಿಕೆ ಸಲ್ಲಿಸುವುದು, ಸ್ವೀಕರಿಸುವುದು, ಇನ್ವೆಂಟರಿ, ಬೇಡಿಕೆಯ ತ:ಖ್ತೆ, ದಾಖಲೆಗಳ ನಿರ್ವಹಣೆ, ವಿತರಣೆ, ಮಾರಾಟ ಮುಂತಾದ ಕಾರ್ಯಗಳನ್ನು ಮುಂತಾದ ಕಾರ್ಯಗಳನ್ನು ನಿರ್ವಹಿಸುವುದು.

## VII. ಇತರೆ ಷರತ್ತು ಮತ್ತು ನಿಬಂಧನೆಗಳು :

1. ಮಾಸಿಕ ಬಸ್ ಪಾಸ್ ಕಳೆದುಹೋದಲ್ಲಿ, ನಕಲು ಬಸ್ ಪಾಸ್ ವಿತರಿಸಲು ಅವಕಾಶವಿರುವುದಿಲ್ಲ.
2. ಪಾಸು ವಿತರಣೆಯಾದ ಅವಧಿಯಲ್ಲಿ ಮಾಸಿಕ ಬಸ್ ಪಾಸನ್ನು ಬಳಕೆ ಮಾಡದಿದ್ದಲ್ಲಿ, ಪಾಸಿನ ಮೊತ್ತವನ್ನು ಮರುಪಾವತಿ ಮಾಡಲಾಗುವುದಿಲ್ಲ.
3. ಅಸಾಧಾರಣ ಸಂದರ್ಭಗಳು ಅಂದರೆ ಬಂದ್, ಮುಷ್ಕರ ಇತ್ಯಾದಿ ಕಾರಣಗಳಿಂದಾಗಿ, ಸೇವೆಗಳ ಆಚರಣೆ ರದ್ದಾದಲ್ಲಿ, ಪಾಸಿನ ದರದ ಮರುಪಾವತಿಗೆ ಅವಕಾಶವಿರುವುದಿಲ್ಲ.
4. ಮಾಸಿಕ ಬಸ್ ಪಾಸನ್ನು ಹೊಂದಿರುವ ಪ್ರಯಾಣಿಕರು ಇತರೆ ಪ್ರಯಾಣಿಕರ ಮೇಲೆ ಹಕ್ಕನ್ನು ಹೊಂದಿರುವುದಿಲ್ಲ. ಬಸ್ಸಿನಲ್ಲಿ ಆಸನದ ಲಭ್ಯತೆಯ ಮೇರೆಗೆ ಪ್ರಯಾಣಿಸಬಹುದಾಗಿದೆ.
5. ನಿಗಮದ ಚಾಲನಾ ಸಿಬ್ಬಂದಿಗಳು ಮಾಸಿಕ ಪಾಸುದಾರರ ಜೊತೆ ಸೌಜನ್ಯದಿಂದ ವರ್ತಿಸುವುದು ಹಾಗೂ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕರ್ತವ್ಯ ನಿರ್ವಹಿಸುವುದು.
6. ನಿಗಮದಲ್ಲಿ ಜಾರಿಯಲ್ಲಿರುವ ಮಾಸಿಕ ಪಾಸುಗಳ ವಿಧ, ದರಗಳ ವಿವರಗಳನ್ನು ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರು ವೀಕ್ಷಿಸಲು ಸೂಕ್ತವಿರುವ ಸ್ಥಳಗಳಲ್ಲಿ ಪ್ರದರ್ಶಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಮಾಸಿಕ ಪಾಸುಗಳ ವಿತರಣೆಗೆ ಕ್ರಮ ವಹಿಸುವುದು.
7. ಮಾಸಿಕ ಪಾಸುಗಳ ವಿತರಣೆ / ಪ್ರಯಾಣಿಕರಿಂದ ಬಳಕೆ ದುರುಪಯೋಗವಾಗದಂತೆ, ಆಗಿಂದಾಗ್ಗೆ ಪಾಸ್ ಕೌಂಟರ್‌ಗಳಲ್ಲಿ ಹಾಗೂ ಬಸ್ಸುಗಳನ್ನು ತನಿಖೆಗೊಳಪಡಿಸಿ ಖಾತ್ರಿಪಡಿಸಿಕೊಳ್ಳುವುದು.
8. ವಿಭಾಗದ ಅಧಿಕಾರಿಗಳು ಆಗಾಗ್ಗೆ ಪಾಸ್ ಕೌಂಟರ್‌ಗಳಿಗೆ ಭೇಟಿ ನೀಡಿ, ಪಾಸುಗಳ ಸಂಖ್ಯೆ, ಹಂತಗಳು ಮುಂತಾದ ವಿವರಗಳನ್ನು ಪರಿಶೀಲಿಸುವುದು ಮತ್ತು ಪಾಸುಗಳ ದುರ್ಬಳಕೆಯಾಗದಂತೆ ಎಚ್ಚರವಹಿಸುವುದು.

## VIII. ಮಾಸಿಕ ತ:ಖ್ತೆ :

ಎಲ್ಲಾ ವರ್ಗದ ಮಾಸಿಕ ಬಸ್ ಪಾಸುಗಳ ವಿತರಣೆಯ ವಿವರಗಳನ್ನು ಕ್ಯಾಲೆಂಡರ್ ತಿಂಗಳುವಾರು ಪ್ರತಿ ತಿಂಗಳು ಅಗತ್ಯ ತ:ಖ್ತೆಯಲ್ಲಿ ತಯಾರಿಸಿ 05 ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಕಳುಹಿಸುವುದು.

ಈ ಸಾಮಾನ್ಯ ಸ್ಥಾಯಿ ಆದೇಶವು ತಕ್ಷಣದಿಂದ ಜಾರಿಗೆ ಬರಲಿದೆ. ಉಲ್ಲೇಖದಲ್ಲಿನ ಸಾಮಾನ್ಯ ಸ್ಥಾಯಿ ಆದೇಶ ಹಾಗೂ ಸುತ್ತೋಲೆಗಳನ್ನು ಅನೂರ್ಜಿತಗೊಳಿಸಲಾಗಿದೆ.

ಆದೇಶ ತಲುಪಿದ್ದಕ್ಕೆ ಸ್ವೀಕೃತಿಯನ್ನು ಹಾಗೂ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು
**ಕ.ರಾ.ರ.ಸಾ.ನಿಗಮ.**

**ಪ್ರತಿಯನ್ನು :**

1) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ. ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ. ನಿಗಮ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಮುದ್ರಣ ನಿಯಂತ್ರಣಾಧಿಕಾರಿಗಳು, ಕ.ರಾ.ಸಾ.ಮುದ್ರಣಾಲಯ, ಬೆಂಗಳೂರು, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
6) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
7) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ / ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಅನುಬಂಧ–ಅ

ಹಂತವಾರು ಮಾಸಿಕ ಪಾಸುಗಳ ದರಗಳು :

| ದರ ವಿಧಿಸುವ ಹಂತಗಳು | ವೇಗದೂತ ಹಾಗೂ ತಡೆರಹಿತ ಸಾರಿಗೆ ಮಾಸಿಕ ಪಾಸು ದರ(ರೂ.ಗಳಲ್ಲಿ) | | ಸಾಮಾನ್ಯ ಸಾರಿಗೆ ಮಾಸಿಕ ಪಾಸು ದರ (ರೂ.ಗಳಲ್ಲಿ) | |
|---|---|---|---|---|
| | ಸಾಮಾನ್ಯ ಪ್ರಯಾಣಿಕರಿಗೆ | ಹಿರಿಯ ನಾಗರಿಕರಿಗೆ | ಸಾಮಾನ್ಯ ಪ್ರಯಾಣಿಕರಿಗೆ | ಹಿರಿಯ ನಾಗರಿಕರಿಗೆ |
| 1 | 400/– | 360/– | 360/– | 325/– |
| 2 | 600/– | 540/– | 600/– | 540/– |
| 3 | 1000/– | 900/– | 880/– | 790/– |
| 4 | 1100/– | 990/– | 1000/– | 900/– |
| 5 | 1200/– | 1080/– | 1120/– | 1010/– |
| 6 | 1400/– | 1260/– | 1200/– | 1080/– |
| 7 | 1550/– | 1395/– | 1320/– | 1190/– |
| 8 | 1700/– | 1530/– | 1440/– | 1300/– |
| 9 | 1850/– | 1665/– | 1600/– | 1440/– |
| 10 | 2000/– | 1800/– | 1680/– | 1510/– |
| 11 | 2150/– | 1935/– | ಅನ್ವಯಿಸುವುದಿಲ್ಲ | |
| 12 | 2250/– | 2025/– | ಅನ್ವಯಿಸುವುದಿಲ್ಲ | |
| 13 | 2300/– | 2070/– | ಅನ್ವಯಿಸುವುದಿಲ್ಲ | |
| 14 | 2350/– | 2115/– | ಅನ್ವಯಿಸುವುದಿಲ್ಲ | |
| 15 | 2450/– | 2205/– | ಅನ್ವಯಿಸುವುದಿಲ್ಲ | |
| 16 | 2550/– | 2295/– | ಅನ್ವಯಿಸುವುದಿಲ್ಲ | |
| 17 | 2600/– | 2340/– | ಅನ್ವಯಿಸುವುದಿಲ್ಲ | |
| 18 | 2650/– | 2385/– | ಅನ್ವಯಿಸುವುದಿಲ್ಲ | |
| 19 | 2700/– | 2430/– | ಅನ್ವಯಿಸುವುದಿಲ್ಲ | |
| 20 | 2750/– | 2475/– | ಅನ್ವಯಿಸುವುದಿಲ್ಲ | |

**ಮೈಸೂರು, ತುಮಕೂರು, ಹಾಸನ ಹಾಗೂ ಮಂಗಳೂರು ನಗರಗಳಲ್ಲಿ ವಿತರಣೆಯಾಗುತ್ತಿರುವ ಮಾಸಿಕ ಬಸ್ ಪಾಸ್ ದರಗಳು:**

| ನಗರ | ಪಾಸಿನ ವಿಧ | ಸಾಮಾನ್ಯ ಪ್ರಯಾಣಿಕರಿಗೆ ದರ (ರೂ.ಗಳಲ್ಲಿ) | ಹಿರಿಯ ನಾಗರಿಕರಿಗೆ ದರ (ರೂ.ಗಳಲ್ಲಿ) |
|---|---|---|---|
| ಮೈಸೂರು ನಗರ | ನಗರ ಸೇವೆಗಳಿಗೆ | 620/– | 565/– |
| | ನಗರ & ಹೊರವಲಯ ಸೇವೆ | 820/– | 745/– |
| | ವೋಲ್ವೋ ಸೇವೆಗಳಿಗೆ | 1025/– | ಅನ್ವಯಿಸುವುದಿಲ್ಲ |

| ನಗರ | ಪಾಸಿನ ವಿಧ | ಸಾಮಾನ್ಯ ಪ್ರಯಾಣಿಕರಿಗೆ ದರ (ರೂ.ಗಳಲ್ಲಿ) | ಹಿರಿಯ ನಾಗರಿಕರಿಗೆ ದರ (ರೂ.ಗಳಲ್ಲಿ) |
|---|---|---|---|
| ತುಮಕೂರು ನಗರ | 02 ಹಂತದವರೆಗೆ ಪ್ರಯಾಣ | 440/– | 400/– |
| | 04 ಹಂತದವರೆಗೆ ಪ್ರಯಾಣ | 490/– | 440/– |
| | 06 ಹಂತದವರೆಗೆ ಪ್ರಯಾಣ | 550/– | 500/– |
| | 08 ಹಂತದವರೆಗೆ ಪ್ರಯಾಣ | 600/– | 540/– |
| | 10 ಹಂತದವರೆಗೆ ಪ್ರಯಾಣ | 650/– | 590/– |

| ನಗರ | ಪಾಸಿನ ವಿಧ | ಸಾಮಾನ್ಯ ಪ್ರಯಾಣಿಕರಿಗೆ ದರ (ರೂ.ಗಳಲ್ಲಿ) | ಹಿರಿಯ ನಾಗರಿಕರಿಗೆ ದರ (ರೂ.ಗಳಲ್ಲಿ) |
|---|---|---|---|
| ಹಾಸನ ನಗರ | 02 ಹಂತದವರೆಗೆ ಪ್ರಯಾಣ | 340/– | 310/– |
| | 04 ಹಂತದವರೆಗೆ ಪ್ರಯಾಣ | 490/– | 440/– |
| | 06 ಹಂತದವರೆಗೆ ಪ್ರಯಾಣ | 600/– | 540/– |
| | 08 ಹಂತದವರೆಗೆ ಪ್ರಯಾಣ | 650/– | 590/– |

| ಮಂಗಳೂರು ವಿಭಾಗ | ಪಾಸಿನ ವಿಧ | ಸಾಮಾನ್ಯ ಪ್ರಯಾಣಿಕರಿಗೆ ದರ (ರೂ.ಗಳಲ್ಲಿ) | ಹಿರಿಯ ನಾಗರಿಕರಿಗೆ ದರ (ರೂ.ಗಳಲ್ಲಿ) |
|---|---|---|---|
| ಮಂಗಳೂರು ಬಸ್ ನಿಲ್ದಾಣ – ಕಾಸರಗೋಡು | ಕಾಸರಗೋಡು–ಕುಂಬಳೆ | 480/– | 430/– |
| | ಕಾಸರಗೋಡು–ಮಂಜೇಶ್ವರ | 880/– | 790/– |
| | ಕಾಸರಗೋಡು–ತಲಪಾಡಿ | 920/– | 830/– |
| | ಕಾಸರಗೋಡು–ಮಂಗಳೂರು | 1040/– | 940/– |
| | ಮಂಗಳೂರು–ಮಂಜೇಶ್ವರ | 1160/– | 1050/– |
| | ಮಂಗಳೂರು–ಕುಂಬಳೆ | 1600/– | 1440/– |
| | ಮಂಗಳೂರು–ಕಾಸರಗೋಡು | 1920/– | 1730/– |
| ಮಂಗಳೂರು ಬಸ್ ನಿಲ್ದಾಣ–ಸ್ಟೇಟ್ ಬ್ಯಾಂಕ್ ಬಸ್ ನಿಲ್ದಾಣ | ಮಂಗಳೂರು ಬಸ್ ನಿಲ್ದಾಣ–ಸ್ಟೇಟ್ ಬ್ಯಾಂಕ್ ಬಸ್ ನಿಲ್ದಾಣ | 600/– | 540/– |

ಅನುಬಂಧ - ೩

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

### ಗುರುತಿನ ಚೀಟಿ

ಗುರುತಿನ ಚೀಟಿ ಸಂಖ್ಯೆ

ಹೆಸರು..................................................................

ವಯಸ್ಸು........................................................ ಲಿಂಗ (ಗಂ./ಹೆಂ.)

ವಿಳಾಸ ...............................................................

.........................................................................

ಮಾನ್ಯತೆ ಅವಧಿ.........................ಯಿಂದ.........................ವರೆಗೆ

ಸ್ಟ್ಯಾಂಪ್ ಅಳತೆಯ ಭಾವಚಿತ್ರ

₹ 50/-

ಪಾಸ್ ವಿತರಿಸುವ ಅಧಿಕಾರಿಯ ಸಹಿ ಮತ್ತು ಮೊಹರು

ಪಾಸ್ ಪಡೆದವರ ಸಹಿ

ಅನುಬಂಧ - ಈ1

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ವೇಗದೂತ ಮತ್ತು ತಡೆರಹಿತ ಬಸ್ಸುಗಳಲ್ಲಿ
ಸಂಚರಿಸಲು ಮಾಸಿಕ ಪಾಸು

ಕ್ರ.ಸಂ.:

ಗುರುತಿನ ಚೀಟಿ ಸಂಖ್ಯೆ : ₹

ಹೆಸರು ........................................ ವಯಸ್ಸು ..................

ಗಂಡು/ಹೆಣ್ಣು .............. ಹಂತ ಸಂ. .............. ರಿಂದ .............. ರವರೆಗೆ ..............

ಎಲ್ಲಿಂದ .............................. ವರೆಗೆ .............................. ಮಾರ್ಗ ..............

ಅವಧಿ .............................. ರಿಂದ .............................. ವರೆಗೆ

ವಿತರಣಾಧಿಕಾರಿ ಸಹಿ ಮತ್ತು ಮೊಹರು

ಪಾಸು ಪಡೆದವರ ಸಹಿ

Jan | Feb | Mar | April | May | June | July | Aug | Sept | Oct | Nov | Dec

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | - |

### ನಿಬಂಧನೆಗಳು

1. ಪಾಸನ್ನು ವರ್ಗಾಯಿಸಲು ಅವಕಾಶವಿರುವುದಿಲ್ಲ.
2. ಅನಿವಾರ್ಯ ಕಾರಣಗಳಿಂದ ಅನುಸೂಚಿಗಳು ರದ್ದಾದಲ್ಲಿ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
3. ಮಾನ್ಯತೆಯ ಅವಧಿಯೊಳಗೆ ಪಾಸ್ ಉಪಯೋಗಿಸದಿದ್ದಲ್ಲಿ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
4. ಸಾಮಾನ್ಯ ಮತ್ತು ವೇಗದೂತ / ತಡೆರಹಿತ ಬಸ್ಸುಗಳನ್ನು ಹೊರತುಪಡಿಸಿ, ಇತರ ಯಾವುದೇ ಪ್ರೀಮಿಯಂ ಸೇವೆಗಳಲ್ಲಿ ಸಂಚರಿಸಲು ಅವಕಾಶವಿರುವುದಿಲ್ಲ.
5. ಪ್ರಯಾಣ ಮಾಡುವಾಗ ಭಾವಚಿತ್ರದ ಗುರುತಿನ ಚೀಟಿ ಮತ್ತು ಪಾಸನ್ನು ಹೊಂದಿರಬೇಕು. ನಿರ್ವಾಹಕರು, ಚಾಲಕರು, ತನಿಖಾದಳ ಅಥವಾ ಸಂಸ್ಥೆಯ ಅಧಿಕಾರಿಗಳು ಪರಿಶೀಲನೆಗಾಗಿ ಕೇಳಿದಾಗ ಗುರುತಿನ ಚೀಟಿ ಮತ್ತು ಪಾಸನ್ನು ಹಾಜರುಪಡಿಸುವುದು.
6. ವೆಬ್‌ಸೈಟ್ : www.ksrtc.in

### ಸಂಸ್ಥೆಯ ಇತರೆ ಸೌಲಭ್ಯಗಳು

1. ಮದುವೆ ಮತ್ತು ಇನ್ನಿತರೆ ಕಾರ್ಯಕ್ರಮಗಳಿಗೆ ಸಾಂದರ್ಭಿಕ ಒಪ್ಪಂದದ ಮೇರೆಗೆ ವಾಹನಗಳನ್ನು ನೀಡಲಾಗುವುದು.
2. ಮುಂಗಡ ಟಿಕೇಟ್ ಕಾಯ್ದಿರಿಸುವಾಗ ಮರಳಿ ಬರುವ ಟಿಕೇಟ್ ಕಾಯ್ದಿರಿಸಿ ಶೇ. 10%ರಷ್ಟು ರಿಯಾಯಿತಿ ಪಡೆಯಬಹುದು.
3. ಗುಂಪು ಆಸನ (ಕನಿಷ್ಠ - 4) ಕಾಯ್ದಿರಿಸಿ ಶೇ. 5%ರಷ್ಟು ರಿಯಾಯಿತಿ ಪಡೆಯಬಹುದು.
4. ಇ-ಮೇಲ್ ಮೂಲಕ ಆಸನ ಕಾಯ್ದಿರಿಸಬಹುದು : www.ksrtc.in.
5. ದೂರು ಮತ್ತು ಸಲಹೆಗಳಿಗೆ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ : 080 - 4959 6666.
6. ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತದೆ.

| | | |
|---|---|---|
| **ರೂ. 400/-** | **ರೂ. 1,550/-** | **ರೂ. 2,700/-** |
| **ರೂ. 600/-** | **ರೂ. 1,700/-** | **ರೂ. 2,750/-** |
| **ರೂ. 1,000/-** | **ರೂ. 2,000/-** | |
| **ರೂ. 1,100/-** | **ರೂ. 2,350/-** | |
| **ರೂ. 1,200/-** | **ರೂ. 2,600/-** | |
| **ರೂ. 1,400/-** | | |

ಅನುಬಂಧ-ಈ

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

**ಸಾಮಾನ್ಯ ಬಸ್ಸುಗಳಲ್ಲಿ ಸಂಚರಿಸಲು ಮಾಸಿಕ ಪಾಸು**

ಕ್ರ.ಸಂ.:

ಗುರುತಿನ ಚೀಟಿ ಸಂಖ್ಯೆ : ₹

ಹೆಸರು............................................................ವಯಸ್ಸು....................

ಗಂಡು/ಹೆಣ್ಣು.................. ಹಂತ ಸಂ.................. ರಿಂದ.................. ರವರೆಗೆ..................

ಎಲ್ಲಿಂದ.................................. ವರೆಗೆ.................................. ಮಾರ್ಗ..................

ಅವಧಿ.................................................ರಿಂದ ................................................. ವರೆಗೆ

ವಿತರಣಾಧಿಕಾರಿ ಸಹಿ ಮತ್ತು ಮೊಹರು | ಪಾಸು ಪಡೆದವರ ಸಹಿ

Jan, Feb, Mar, April, May, June, July, Aug, Sept, Oct, Nov, Dec

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | - |

## ನಿಬಂಧನೆಗಳು

1. ಪಾಸನ್ನು ವರ್ಗಾಯಿಸಲು ಅವಕಾಶವಿರುವುದಿಲ್ಲ.
2. ಅನಿವಾರ್ಯ ಕಾರಣಗಳಿಂದ ಅನುಸೂಚಿಗಳು ರದ್ದಾದಲ್ಲಿ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
3. ಪೂರ್ಣತೆಯ ಅವಧಿಯೊಳಗೆ ಪಾಸ್ ಉಪಯೋಗಿಸದಿದ್ದಲ್ಲಿ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
4. ಸಾಮಾನ್ಯ ಬಸ್ಸುಗಳನ್ನು ಹೊರತುಪಡಿಸಿ, ಇತರೆ ಯಾವುದೇ ವೇಗದೂತ / ಪ್ರೀಮಿಯಂ ಸೇವೆಗಳಲ್ಲಿ ಸಂಚರಿಸಲು ಅವಕಾಶವಿರುವುದಿಲ್ಲ.
5. ಪ್ರಯಾಣ ಮಾಡುವಾಗ ಭಾವಚಿತ್ರದ ಗುರುತಿನ ಚೀಟಿ ಮತ್ತು ಪಾಸನ್ನು ಹೊಂದಿರಬೇಕು. ನಿರ್ವಾಹಕರು, ಚಾಲಕರು, ತನಿಖಾದಳ ಅಥವಾ ಸಂಸ್ಥೆಯ ಅಧಿಕಾರಿಗಳು ಪರಿಶೀಲನೆಗಾಗಿ ಕೇಳಿದಾಗ ಗುರುತಿನ ಚೀಟಿ ಮತ್ತು ಪಾಸನ್ನು ಹಾಜರುಪಡಿಸುವುದು.
6. ವೆಬ್‌ಸೈಟ್ : www.ksrtc.in

## ಸಂಸ್ಥೆಯ ಇತರೆ ಸೌಲಭ್ಯಗಳು

1. ಮದುವೆ ಮತ್ತು ಇನ್ನಿತರೇ ಕಾರ್ಯಕ್ರಮಗಳಿಗೆ ಸಾಂದರ್ಭಿಕ ಒಪ್ಪಂದದ ಮೇರೆಗೆ ವಾಹನಗಳನ್ನು ನೀಡಲಾಗುವುದು.
2. ಮುಂಗಡ ಟಿಕೇಟ್ ಕಾಯ್ದಿರಿಸುವಾಗ ಮರಳಿ ಬರುವ ಟಿಕೇಟ್ ಕಾಯ್ದಿರಿಸಿ ಶೇ. 10%ರಷ್ಟು ರಿಯಾಯಿತಿ ಪಡೆಯಬಹುದು.
3. ಗುಂಪು ಆಸನ (ಕನಿಷ್ಠ - 4) ಕಾಯ್ದಿರಿಸಿ ಶೇ. 5%ರಷ್ಟು ರಿಯಾಯಿತಿ ಪಡೆಯಬಹುದು.
4. ಇ-ಮೇಲ್ ಮೂಲಕ ಆಸನ ಕಾಯ್ದಿರಿಸಬಹುದು : www.ksrtc.in.
5. ದೂರು ಮತ್ತು ಸಲಹೆಗಳಿಗೆ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ : 080 - 4959 6666.
6. ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತದೆ.

**ರೂ. 360/-**

**ರೂ. 600/-**

**ರೂ. 880/-**

**ರೂ. 1,000/-**

**ರೂ. 1,120/-**

**ರೂ. 1,200/-**

ಅನುಬಂಧ - ಉ

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ಸಾರ್ವಜನಿಕ ಪ್ರಯಾಣಿಕರು ಮೈಸೂರು ನಗರ ಸಾರಿಗೆ ಹಾಗೂ ಹೊರವಲಯ ಸಾರಿಗೆ ವಾಹನಗಳಲ್ಲಿ ಪ್ರಯಾಣ ಮಾಡಲು ಮಾಸಿಕ ಪಾಸು

ಕ್ರಮ ಸಂಖ್ಯೆ № 289301 ಗುರುತಿನ ಚೀಟಿ ಸಂಖ್ಯೆ : S

SPECIMEN

ಹೆಸರು : ........................

ವಯಸ್ಸು : ........................ ರೂ. 820

ವಿಳಾಸ : ........................ ಫೆಬ್ರವರಿ

........................ 2019

ಮೂಲಭೂತ ಅಭಿವೃದ್ಧಿ ಸೌಲಭ್ಯ ಶುಲ್ಕ ರೂ.20/- ವಿಮಾ ಶುಲ್ಕ ರೂ.20/- ಪ್ರತ್ಯೇಕ

KSRTC KSRTC KSRTC KSRTC KSRTC KSRTC KSRTC KSRTC KSRTC KSRTC KSRTC KSRTC KSRTC KSRTC

ಪಾಸು ವಿತರಿಸುವ ಅಧಿಕಾರಿಯ ಸಹಿ ಮೊಹರು ಮತ್ತು ದಿನಾಂಕ

VOID

(ವರ್ಗಾಯಿಸಲಾಗುವುದಿಲ್ಲ)

ಪಾಸು ಪಡೆದವರ ಸಹಿ

KSTP B'lore 27

---

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ಸಾರ್ವಜನಿಕ ಪ್ರಯಾಣಿಕರು ಮೈಸೂರು ನಗರ ಸಾರಿಗೆ ವಾಹನಗಳಲ್ಲಿ ಪ್ರಯಾಣ ಮಾಡಲು ಮಾಸಿಕ ಪಾಸು

ಕ್ರಮ ಸಂಖ್ಯೆ № 357201 ಗುರುತಿನ ಚೀಟಿ ಸಂಖ್ಯೆ : C

SPECIMEN

ಹೆಸರು : ........................

ವಯಸ್ಸು : ........................ ರೂ. 620

ವಿಳಾಸ : ........................ ಫೆಬ್ರವರಿ

........................ 2019

ಮೂಲಭೂತ ಅಭಿವೃದ್ಧಿ ಸೌಲಭ್ಯ ಶುಲ್ಕ ರೂ.10/- ವಿಮಾ ಶುಲ್ಕ ರೂ.10/- ಪ್ರತ್ಯೇಕ

KSRTC KSRTC KSRTC KSRTC KSRTC KSRTC KSRTC

ಪಾಸು ವಿತರಿಸುವ ಅಧಿಕಾರಿಯ ಸಹಿ ಮೊಹರು ಮತ್ತು ದಿನಾಂಕ

VOID

(ವರ್ಗಾಯಿಸಲಾಗುವುದಿಲ್ಲ)

ಪಾಸು ಪಡೆದವರ ಸಹಿ

KSTP B'lore 27

---

## ನಿಬಂಧನೆಗಳು

1. ಸದರಿ ಪಾಸು ಕ.ರಾ.ರ.ಸಾ. ನಿಗಮದ ನಿಬಂಧನೆಗಳಿಗೆ ಒಳಪಟ್ಟಿದೆ.
2. ಪಾಸನ್ನು ವರ್ಗಾಯಿಸುವಂತಿಲ್ಲ ಹಾಗೂ ನವೀಕರಿಸುವಂತಿಲ್ಲ.
3. ತಿಂಗಳ ಪಾಸು ಕಳೆದುಹೋದಲ್ಲಿ ನಿಗಮವು ಜವಾಬ್ದಾರಿಯಲ್ಲ.
4. ಪ್ರಯಾಣ ಮಾಡುವಾಗ ಗುರುತಿನ ಚೀಟಿ ಮತ್ತು ಪಾಸನ್ನು ಹೊಂದಿರಲೇಬೇಕು ಮತ್ತು ಅದನ್ನು ನಿರ್ವಾಹಕ, ಚಾಲಕ, ತನಿಖಾ ಸಿಬ್ಬಂದಿಗೆ ಪರಿಶೀಲನೆಗಾಗಿ ತೋರಿಸಬೇಕು.
5. ಗುರುತಿನ ಚೀಟಿ ಹಾಗೂ ತಿಂಗಳ ಪಾಸನ್ನು ಹಾಜರುಪಡಿಸದಿದ್ದಲ್ಲಿ ಅದನ್ನು ಅಪರಾಧವೆಂದು ಪರಿಗಣಿಸಲಾಗುವುದು ಮತ್ತು ಅವರು ಟಿಕೇಟ್ ರಹಿತ ಪ್ರಯಾಣಿಕರಂತೆ ದಂಡನೆಗೆ ಅರ್ಹರು.